**ದಿನಾಂಕಃ 06-12-2025ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ **ಸವಾಲು:- ಶ್ರೀ.ಜಿ.ಹೆಚ್.ಎಂ. ವಕೀಲರಿಂದ ಆರೋಪಿಗಳ ಪರವಾಗಿ:-**

ನೀವು ಘಟನೆ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ನೀಡಿದ್ದೇನೆ ಎಂದು ನುಡಿಯುತ್ತಾರೆ. ನೀವು ಹೇಳಿಕೆಯನ್ನು ಯಾವ ದಿನಾಂಕ, ಯಾವ ಅಧಿಕಾರಿಯ ಮುಂದೆ ನೀಡಿರುತ್ತೀರಿ ಎಂದರೆ ಸಾಕ್ಷಿಯು ದಿಃ12.03.2022ರಂದು ಪೋಲೀಸರ ಮುಂದೆ ಹೇಳಿರುತ್ತೇನೆ ಆದರೆ ಅವರ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನೆ ಆದಾಗ ನೀವಲ್ಲದೆ ಎಷ್ಟು ಜನ ಅಲ್ಲಿ ಇರುತ್ತೀರಿ ಎಂದರೆ ಸಾಕ್ಷಿಯು ಸುಮಾರು 7 ರಿಂದ 8 ಜನ ಇದ್ದೇವು ಎಂದು ನುಡಿಯುತ್ತಾರೆ. ಸದರಿ 7 ರಿಂದ 8 ಜನರ ಹೆಸರು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಚಂದ್ರಪ್ಪ, ನಾರಾಯಣ, ಹನುಮಂತು ಇನ್ನೂ ಸುಮಾರು ಜನರು ಇದ್ದರು ಎಂದು ನುಡಿಯುತ್ತಾರೆ. ಘಟನೆ ಆದಾಗ ಸುಮಾರು ಎಷ್ಟು ಜನ ಇದ್ದರು ಎಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

2. ಘಟನೆ ಆದಾಗ ಅಪಘಾತ ಪಡಿಸಿದ ವಾಹನ ಅಲ್ಲೇ ಇತ್ತಾ ಅಥವಾ ಹೋಗಿರುತ್ತದಾ ಎಂದರೆ ಸಾಕ್ಷಿಯು ಅಲ್ಲಿ ಇರಲಿಲ್ಲ, ಪೋಲೀಸ್ ಠಾಣೆಗೆ ಅವರೇ ಹೋಗಿರುತ್ತಾರೆ ಎಂದು ನುಡಿಯುುತ್ತಾರೆ. ಯಾವ ಪೋಲೀಸರ್ ಠಾಣೆಗೆ ಹೋಗಿರುತ್ತಾರೆ ಎಂದರೆ ಸಾಕ್ಷಿಯು ಕುದೂರು ಪೋಲೀಸ್ ಠಾಣೆಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ.ನೀವು ಪೋಲೀಸರಿಗೆ ಅಪಘಾತಪಡಿಸಿದ ವಾಹನ ಹೋಗಿರುತ್ತದೆ ಎಂದು ಹೇಳಿಕೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಚಾಸಾ-1ರವರಿಗೆ ನೀವು ಅವರ ತಂದೆಗೆ ಅಪಘಾತ ವಾಗಿದೆ ಎಂದು ಮಾಹಿತಿ ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನೀವು ಪೋಲೀಸರಿಗೆ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ತಿಳಿಸಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿಯ ಹೆಸರು ಗೊತ್ತಿದಿಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅಪಘಾತಪಡಿಸಿ ವ್ಯಕಿಯ ಹೆಸರು ಹಾಗೂ ವಿಳಾಸವನ್ನು ತಿಳಿದುಕೊಂಡಿರುತ್ತೀರಾ ಎಂದರೆ

ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಈ ಅಪಘಾತದಿಂದ ಕಾರಿಗೆ ಯಾವ ರೀತಿಯ ಡ್ಯಾಮೇಜ್ ಅಗಿರುತ್ತದೆ ಎಂದರೆ ಸಾಕ್ಷಿಯು ಬ್ಯಾನೇಟ್ ಮತ್ತು ಗ್ಲಾಸ್ ಜಖಂ ಗೊಂಡಿರುತ್ತದೆ ಎಂದು ನುಡಿಯುತ್ತಾರೆ.

3. ಸದರಿ ವಿಚಾರದ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೀರಾ ಎಂದರೆ ಸಾಕ್ಷಿಯುು ಹೌದು ಎಂದು ನುಡಿಯುತ್ತಾರೆ. ಟಿ.ವಿ.ಎಸ್ ವಾಹನಕ್ಕೆ ಎಲ್ಲಿ ಎಲ್ಲಿ ಅಪಘಾತ ವಾಗಿರುತ್ತದೆ ಎಂದರೆ ಸಾಕ್ಷಿಯು ಇಂಜಿನ್ ಮತ್ತು ಡೂಂ ಹಾಗೂ ಶೆಟಲ್ ಡ್ಯಾಮೇಜ್ ಅಗಿರುತ್ತದೆ ಎಂದು ನುಡಿಯುತ್ತಾರೆ. ಪೋಲೀಸರು ಏನು ಬರೆದುಕೊಂಡಿದ್ದಾರೆಂದು ನೀವು ಕೇಳಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯ ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನೀವು ಅದಕ್ಕೆ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಘಟನೆ ಆದ ಸ್ಥಳದಲ್ಲಿ ಗಾಡಿಯನ್ನು ಯೂಟರ್ನ್ ಮಾಡಲು ಜಾಗ ಇತ್ತಾ ಎಂದರೆ ಸಾಕ್ಷಿಯು ಇತ್ತು ಎಂದು ನುಡಿಯುತ್ತಾರೆ. ನೀವು ಅಲ್ಲದೆ ಈ ಘಟನೆಯನ್ನು ಬೇರೆ ಯಾರು ಯಾರು ನೋಡಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-7ಮತ್ತು 8 ರವರು ನೋಡಿರುತ್ತಾರೆ ಎಂದು ನುಡಿಯುತ್ತಾರೆ.

4.ನಿಮ್ಮ ಹೇಳಿಕೆಯಲ್ಲಿ ಘಟನೆಯನ್ನು ನೀವಲ್ಲದೆ ಚಾಸಾ-7 ಮತ್ತು 8 ರವರು ಸಹ ನೋಡಿರುತ್ತಾರೆ ಎಂದು ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ನೀಡಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿಯ ತಪ್ಪಿ ನಿಂದ ಆಯಾವುದೇ ಅಪಘಾತ ಆಗಿಲ್ಲ, ಮೃತ ಗಂಗಸ್ವಾಮಯ್ಯನವರ ಅಜಾಗರೂಕತೆಯಿಂದ ಅಪಘಾತವಾಗಿರುತ್ತೇದೆ ಅವರು ನಿಮಗೆ ಪರಿಚಯಸ್ಥರಾದ್ದಗಿಂದ ಅವರ ಕುಟುಂಬಕ್ಕೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮೃತ ಗಂಗಸ್ವಾ ಮಯ್ಯನವರನ್ನು ನೀವು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಯಾವ ಆಸ್ಪತ್ರೆಗೆ ಯಾರು ಯಾರು ಕರೆದುಕೊಂಡು ಹೋಗಿರುತ್ತೀರಿ ಎಂದರೆ ಸಾಕ್ಷಿಯು ಮಾಗಡಿ ಸರ್ಕಾರಿ ಆಸ್ಪತ್ರೆಗೆ ನಾನು, ಚಂದ್ರಪ್ಪ ಹಾಗೂ ಚಾಸಾ-8ರವರು ಕರೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ.

ಈ ವಿಚಾರವನ್ನು ನೀವು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ನೀಡಿದ್ದೇನೆ ಎಂದು ನುಡಿಯುತ್ತಾರೆ.

5. ಮೃತ ಗಂಗಸ್ವಾಮಯ್ಯನವರು ನಿಮ್ಮ ಸಂಬಂಧಿಕರು, ಘಟನೆ ನೋಡದೇ ಇದ್ದರೂ ಸಹ ನೀವು ನೋಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರೀ ಎಂದರೆ ಸರಿಯಲ್ಲ. ಆರೋಪಿಯನ್ನು ನೀವು ಇದೇ ಮೊದಲನೇ ಬಾರಿ ನ್ಯಾಯಾಲಯದ ಮುಂದೆ ನೋಡುತ್ತಿದ್ದೀರಿ, ಅಪಘಾತವಾದ ಸ್ಥಳದಲ್ಲಿ ನೋಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**